ಓ ಎಸ್ ನಂಬರಃ  52 /2017

ಪಿ  ಡಬ್ಲ್ಯೂಃ 1

(  ಸಾಕ್ಷಿಯನ್ನು  ಪುನಃ  ಕರೆಯಿಸಿ  ದಿನಾಂಕಃ  12-12-2019  ರಂದು  ಪ್ರಮಾಣ  ವಚನ ಭೋಧಿಸಲಾಯಿತು .)

**<u>ಪಾಟೀ ಸವಾಲುಃ  ಶ್ರೀ ವಿ ವಿ ಎಸ  ವಕೀಲರಿಂದಃ</u>**          ದಾವಾ ಆಸ್ತಿಯ  ಸರ್ವೆ ನಂಬರ 14/2 ಇರುತ್ತದೆ . ಅದು  ನಾನು   ಗಣಪತಿ ಮಹಾಬಲೇಶ್ವರ  ಭಟ್ಟ  ಅವರಿಂದ ಖರೀದಿ ಮಾಡಿದ್ದೇನೆ . ಅದನ್ನು  ಖರೀದಿ ಮಾಡಿದ ಬಗ್ಗೆ  ನಾನು ನ್ಯಾಯಾಲಯಕ್ಕೆ ದಸ್ತಾವೇಜು , ನಕಾಶೆಯನ್ನು  ಹಾಜರು ಪಡಿಸಿದ್ದೇನೆ .   ಪ್ರತಿವಾದಿ  ಹೇಳುವ  ಪ್ರಕಾರ   ದಸ್ತಾವೇಜು  ಮತ್ತು ಪ್ರತ್ಯೇಕ ನಕಾಶೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ  ನಾನು ದಿಃ 24-06-2014 ರಂದು  ಖರೀದಿ ಮಾಡಿದೇನೆ . ಪ್ರತಿವಾದಿ  ಅವರ  ಸರ್ವೆ ನಂಬರ 14/3 .  ಅವರ  ಜಮೀನು ಅಂದಾಜು   38  ಗುಂಟೆ ಇರುತ್ತದೆ . ಅದನ್ನು ಅವರು  ನನಗಿಂತ  3  ,4  ವರುಷ ಮುಂಚೆ ಖರೀದಿ ಮಾಡಿದ್ದರು . ನನಗೆ ಮಾರಾಟ ಮಾಡಿ ಕೊಟ್ಟಿರುವ  ಗಣಪತಿ ಮಹಬಲೇಶ್ವರ  ಭಟ್ಟ  ಅವರ  ಅಣ್ಣ   ಪ್ರತಿವಾದಿಯವರಿಗೆ  ಅವರ ಸರ್ವೆ ನಂಬರ ಮಾರಾಟ ಮಾಡಿ ಕೊಟ್ಟಿದ್ದಾರೆ  . ಗಣಪತಿ  ಮತ್ತು  ಅವರ ಅಣ್ಣ ಪ್ರತ್ಯೇಕ  ಜಾಗವನ್ನು ಮಾಡಿಕೋಂಡಿದ್ದರು  ಎಂದರೆ ಸರಿ .  ಅವರು  ಪ್ರತ್ಯೇಕ  ಗಡಿ ಗುರುತಿಸಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ . ಪ್ರತಿವಾದಿಯವರು   ಖರೀದಿ ಮಾಡುವ ಸಮಯದಲ್ಲಿ  ಗಣಪತಿ ಅಣ್ಣ ಗಡಿ ಗುರುತಿಸಿ ಖರೀದಿ   ಕೊಟ್ಟಿದಾರೆ ಎಂದರೆ ಸಾಕ್ಷಿಯು ನನಗೆ  ಗೊತ್ತಿಲ್ಲ ಎಂದು  ಉತ್ತರಿಸುತ್ತಾರೆ . ಪ್ರತಿವಾದಿ ಖರೀದಿ ಮಾಡುವ  ಸಮಯದಲ್ಲಿ   ಗಡಿ ನೋಡಿ ಕೊಂಡು ಬೇಲಿ  ಹಾಕಿದ್ದಾರೆ  ಎಂದರೆ  ಸಾಕ್ಷಿಯು ಮಧ್ಯದಲ್ಲಿ   ಬೇಲಿ ಇರಲಿಲ್ಲಾ   ಎಂದು   ಉತ್ತರಿಸುತ್ತಾರೆ .  ಪ್ರತಿವಾದಿ ಯವರು  ತೆಗೆದುಕೊಂಡ ಜಾಗವನ್ನು ಅವರೆ ಕಬ್ಜಾ  ವಹಿವಾಟು ಮಾಡಿ ಕೊಂಡು ಬಂದಿದ್ದಾರೆ ಎಂದರೆ ಸರಿ .

4.  ನಮ್ಮ ಜಮೀನಿನಲ್ಲಿ   ನಾವು ತೆಂಗು, ಅಡಿಕೆ ಮತ್ತು ಬಾಳೆ  ಗೇರು  ಗಿಡ ಬೆಳೆಸಿದ್ದೇವೆ .ನನ್ನ ಗಂಡ ಸ್ಥಳಿಯ  ರಾಜಕೀಯ  ಮುಖಂಡ  ಎಂದರೆ ಸರಿ . ನಮ್ಮದು ಒಂದು ಅಂಗಡಿ  ಇದೆ  ಎಂದರೆ ಸರಿಯಲ್ಲ  . ಅದು ನಮ್ಮ ಸಹೋದರನದು  ಎಂದು ಉತ್ತರಿಸುತ್ತಾರೆ .

( ಮುಂದುವರೆದ ಪಾಟೀ ಸವಾಲಿಗೆ ಶ್ರೀ ವಿ ವಿ ಎಸ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.